ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)105(20)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸುವರ್ಣ ಗ್ರಾಮೋದಯ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗುವುದು ಮತ್ತು ಆಯ್ಕೆ ಮಾಡುವಾಗ ಸರ್ಕಾರ ಅನುಸರಿಸುವ ಮಾನದಂಡವೇನು?

ಆ) ಉಡುಪಿ ಜಿಲ್ಲೆಯಲ್ಲಿ ಆಯ್ಕೆಗೊಂಡ ಗ್ರಾಮಗಳನ್ನು ವಿಧಾನಸಭಾ ಕ್ಷೇತ್ರವಾರು ನೀಡಲಾಗುವುದೇ,

ಇ) ಹಾಗಿದ್ದಲ್ಲಿ, ಆಯ್ಕೆಗೊಂಡ ಗ್ರಾಮಗಳ ಅಭಿವೃದ್ಧಿಯ ಯೋಜನೆಯನ್ನು ಜಾರಿಗೆ ತರುವ ಹೊಣೆಯನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುವುದೇ, (ವಿವರ ಒದಗಿಸುವುದು)

ಈ) ಉಡುಪಿ ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಆಯ್ಕೆಗೊಂಡ ಗ್ರಾಮದ ಪ್ರಗತಿ ವಿವರ ನೀಡುವುದು?

ಶ್ರೀ ಸಿ ಎಂ ಉದಾಸಿ

ಅ) ಆಯ್ಕೆಯನ್ನು ತಾಲ್ಲೂಕುವಾರು ಮಾಡಲಾಗುವುದು ಆ ತಾಲ್ಲೂಕಿನಲ್ಲಿ ವ್ಯಾಪಿಸಿರುವ ಮತಕ್ಷೇತ್ರವನ್ನು ಗಣನೆಗೆ ತೆಗೆದುಕೊಂಡು ತಾಲ್ಲೂಕಿಗೆ ನಿಗದಿಪಡಿಸಿದ ಜನಸಂಖ್ಯೆ ಮಿತಿಯೊಳಗೆ ಗ್ರಾಮಗಳ ಆಯ್ಕೆಯನ್ನು ಅಂತಿಮಗೊಳಿಸಲಾಗುತ್ತದೆ

ಪ್ರತಿ ವ್ಯಕ್ತಿಗೆ ರೂ 2500 ರಿಂದ 3000ದವರೆಗೆ ಅಂದಾಜಿನ ಹೆಚ್ಚುವರಿ ಅಬಿವೃದ್ಧಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗನುಗುಣವಾಗಿ ಹಾಗೂ ಡಾ ಡಿ ಎಂ

ನಂಜುಂಡಪ್ಪ ನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 1 15, 1 10, 1 05 ಮತ್ತು 1 00 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಿದ ಜನಸಂಖ್ಯೆ ಗೊಳಪಟ್ಟು ಸಾಮಾನ್ಯವಾಗಿ 2000ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಆ)ಅನುಬಂಧ–1 ರಲ್ಲಿ ನೀಡಲಾಗಿದೆ

ಇ)ಇಲ್ಲ

ಈ)ಆಯ್ಕೆಯಾದ 25 ಗ್ರಾಮಗಳ ಪೈಕಿ 21 ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಸರ್ಕಾರದಿಂದ ಈಗಾಗಲೇ ಅನುಮೋದನೆ ನೀಡಲಾಗಿದೆ ಪ್ರತಿ ಗ್ರಾಮಕ್ಕೆ ರೂ 14 40 ಲಕ್ಷಗಳ ಅಂದಾಜಿನಲ್ಲಿ ರೂ 360 00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಅಲ್ಪಾವಧಿ ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿದೆ

ಅನುಬಂಧ–1
ಸುವರ್ಣ ಗ್ರಾಮೋದಯ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ ಸರ್ಕಾರದಿಂದ ಆಯ್ಕೆಯಾದ ಗ್ರಾಮಗಳ ಪಟ್ಟಿ

ಕ್ರ.ಸಂ	ತಾಲೂಕು	ವಿಧಾನಸಭಾ ಕ್ಷೇತ್ರ	ಗ್ರಾಮ ಪಂಚಾಯತ್	ಗ್ರಾಮ
1	ಕಾರ್ಕಳ	ಕಾರ್ಕಳ	ವರಂಗ	ವರಂಗ
2			ನೀರೆ	ನೀರೆ
3			ಮುಡಾರು	ಮುಡಾರು
4			ಈದು	ನೂರಾಲ್ ಬೆಟ್ಟು
5			ರೆಂಜಾಳ	ರೆಂಜಾಳ
6			ಕಡ್ತಲ	ಕಡ್ತಲ
7	ಕುಂದಾಪುರ	ಕುಂದಾಪುರ	ಅಮಾಸೆ ಬೈಲು	ಅಮಾಸೆ ಬೈಲು
8			ಮೊಳಹಳ್ಳಿ	ಮೊಳಹಳ್ಳಿ
9			ಮೆಡಾಮಕ್ಕಿ	ಮಡಾಮಕ್ಕಿ
10			ಬಸ್ರೂರು	ಬಸ್ರೂರು
11			ಬೀಜಾಡಿ	ಬೀಜಾಡಿ
12		ಬೈಂದೂರು	ಕಾಲ್ತೋಡು	ಕಾಲ್ತೋಡು
13			ಕಂಬದ ಕೋಣೆ	ಕಂಬದ ಕೋಣೆ
14			ಹಕ್ಲಾಡಿ	ಹಕ್ಲಾಡಿ
15			ಪಡುವರಿ	ಪಡುವರಿ
16			ಹೆಮ್ಮಾಡಿ	ದೇವಲ್ಕುಂದ
17	ಉಡುಪಿ	ಕಾಪು	ಕಾಪು	ಮೂಳೂರು
18			ಬೆಳ್ಳೆ	ಬೆಳ್ಳೆ
19			ಬೆಳಪು	ಬೆಳಪು
20			ಪಲಿಮಾರು	ಪಲಿಮಾರೆ
21		ಉಡುಪಿ	ಅಲೆವೂರು	ಅಲೆವೂರು
22			80 ಬಡಗಬೆಟ್ಟು	80ಬಡಗಬೆಟ್ಟು
23			ಅಂಬಲಪಾಡಿ	ಕಿದಿಯೂರು
24		ಬ್ರಹ್ಮಾವರ	ಕೋಟ	ಮಣೂರು
25			ಬಾರ್ಕೂರು	ಕಚ್ಚೂರು–ಹೊಸಾಳ